ಆಪಾದಿತನಾಗಿರತಕ್ಕಂಥ, ಒಬ್ಬ ಅಪರಾಧಿ ಕೊಟ್ಟ ಹೇಳಿಕೆಯನ್ನು ನಾವು ನಂಬುತ್ತೇವೆನ್ನುವುದಾಗಿದ್ದರೆ, ಅದು ಎಷ್ಟುಮಟ್ಟಿಗೆ ಗ್ರಾಹ್ಯ. ಅದು ಎಷ್ಟುಮಟ್ಟಿಗೆ ಈ ತರಹದಿಂದ ಪರಸ್ಪರ ನಾವು ಕೆಸರನ್ನು ಎರಚಾಡುವ ರೀತಿಯಲ್ಲಿ ಪ್ರಯತ್ನವನ್ನು ಮಾಡಿದರೆ ಸಾರ್ವಜನಿಕ ಜೀವನದಲ್ಲಿ ಬದುಕುವಂಥ ಯಾವುದೇ ಶಾಸಕ, ಸಂಸದ ಅಥವಾ ಮಂತ್ರಿ ಅಥವಾ ಬೇರೆ ಬೇರೆ ಸಾರ್ವಜನಿಕ ಪ್ರತಿನಿಧಿಗಳಾಗಿರತಕ್ಕಂಥವರ ಬಗ್ಗೆ ಜನಸಾಮಾನ್ಯರು ತಮ್ಮ ವಿಶ್ವಾಸವನ್ನು ಕಳೆದುಕೊಳ್ಳುತ್ತಾರೆ. ತನ್ಮೂಲಕವಾಗಿ ಪ್ರಜಾಪ್ರಭುತ್ವ ತನ್ನ ಇಡೀ ಅದರ ಜೀವದ್ರವ್ಯವನ್ನೇ ಕಳೆದುಕೊಳ್ಳುತ್ತದೆ. ಆ ಕಾರಣಕ್ಕಾಗಿಯೇ, ತಾವೇನು ಹೇಳಿದ್ದೀರಿ, ಇದು ಪತ್ರಿಕೆಯಲ್ಲಿ ಬರುತ್ತದೆ, ತಾವೂ ಕೂಡ ತಮ್ಮ ಗೆಳೆಯರು, ಅವರು ಕೂಡ ಹಿರಿಯರೇ. ನಿಮಗಿಂತಲೂ ಬಹಳ ಹಿರಿಯರಾಗಿ 1962 ರಲ್ಲೇ ಈ ಸದನವನ್ನು ಪ್ರವೇಶ ಮಾಡಿ ವಿವಿಧ ಹುದ್ದೆಗಳನ್ನು ಅಲಂಕರಿಸಿರತಕ್ಕಂಥ ಒಬ್ಬ ಮಾಜಿ ಮುಖ್ಯಮಂತ್ರಿ. ಆ ವಿಚಾರದಲ್ಲಿ ತಾವು ಖಾಸಗಿಯಾಗಿ ಮಾತನಾಡಬಹುದು. ಯಾರೋ ಒಬ್ಬ ವ್ಯಕ್ತಿ ನಿಯಮಾವಳಿಗಳ ಪ್ರಕಾರ ಮಾತನಾಡುವುದಾಗಿದ್ದರೆ, ನೀವು ಈ ಹೇಳಿಕೆಯನ್ನು ಕೊಟ್ಟೇ ತೀರಬೇಕೆನ್ನುವಂಥ ಒತ್ತಾಯವನ್ನು ಮಾಡತಕ್ಕಂಥ ಕಾರಣ ಇಲ್ಲ. ಆ ಕಾರಣಕ್ಕಾಗಿ ಪ್ರಾಯಶಃ ಅದನ್ನು ಇಲ್ಲಿಗೇ ಕೈಬಿಡತಕ್ಕಂಥಾದ್ದು ಒಳ್ಳೆಯದೆಂದು ಹೇಳುತ್ತೇನೆ.

ವಿಷಯ : ಸಂಗ್ರಾಮ್‌ಸಿಂಗ್ ಹೇಳಿಕೆ ಬಗ್ಗೆ ಚರ್ಚಿಸಲು ಅವಕಾಶ ನೀಡುವ ಬಗ್ಗೆ

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ಪವಿತ್ರವಾದಂಥ ವಿರೋಧ ಪಕ್ಷದ ನಾಯಕನ ಸ್ಥಾನದಲ್ಲಿ ಅನೇಕ ಅತಿರಥ ಮಹಾರಥರು ತಮ್ಮ ಜೀವನ ಪೂರ್ತಿ ನಾವು ಪಾಠ ಕಲಿಯುವ ರೀತಿಯಲ್ಲಿ ತಮ್ಮ ಕೆಲಸವನ್ನು ನಿರ್ವಹಣೆ ಮಾಡಿದ್ದಾರೆ. ಇದು ಬಹಳ ಜವಾಬ್ದಾರಿ ಸ್ಥಾನ. ನಾನು ಏನೇ ಮಾತನಾಡಬೇಕಾದರು ಬಹಳ ಜವಾಬ್ದಾರಿಯಿಂದ ಮಾತನಾಡಬೇಕಾಗುತ್ತೆ. ಕೊರತೆ ಇದ್ದರೆ, ನಾವೆಲ್ಲಾ ಸರಿಪಡಿಸಿಕೊಂಡು ಹೋಗಬೇಕಾಗುತ್ತೆ. ನಾನು ಪರಿಪೂರ್ಣ ಎಂದು ಹೇಳುವುದಿಲ್ಲ. ಆದರೆ, ಪ್ರಶ್ನೆ ಏನೆಂದರೆ, ಆಶ್ಚರ್ಯಕರ ಸಂಗತಿ ಎಂದರೆ, ಐ.ಪಿ.ಸಿ.130ರ ಪ್ರಕಾರ r/w TADA ಯಾರಾದರೂ ಘೋಷಿತ ಅಪರಾಧಿಗೆ ಡೈರೆಕ್ಟ್‌ಲಿ ಇನ್‌ಡೈರೆಕ್ಟ್‌ಲಿ ರಕ್ಷಣೆ ಕೊಟ್ಟರೆ ಅದು ಅಕ್ಷಮ್ಯ ಅಪರಾಧ ಅಂತ ಹೇಳಿ ಈ ಐ.ಪಿ.ಸಿ. 130ರ ಪ್ರಕಾರ ಅವನು ಶಿಕ್ಷೆಗೆ ಅರ್ಹನಾಗುತ್ತಾನೆ. 10 ವರ್ಷಗಳ ಕಾಲ ಶಿಕ್ಷೆಗೆ ಅವಕಾಶವಾಗುತ್ತದೆ. ಸೆಷನ್ಸ್ ಕೋರ್ಟ್‌ನಲ್ಲಿ ಅವನ ಬಗ್ಗೆ ತನಿಖೆಯಾಗುತ್ತದೆ. ಇದು ನಂಬರ್ ಒನ್. ಎರಡನೆಯದು ನಾವೆಲ್ಲಾಗಮನಿಸಬೇಕಾದ ಒಂದು ಅಂಶ ಅಂದರೆ ಯಾವುದೇ ಒಬ್ಬ ಅಧಿಕಾರಿ ಕೆಲಸ ಮಾಡುವಂತಹ ಕಾಲದಲ್ಲಿ ಅತ್ಯಂತ ಪ್ರಾಮಾಣಿಕವಾಗಿ ಕೆಲಸ ಮಾಡಿದಾಗ ಬೆನ್ನು ತಟ್ಟಿ ಅವನಿಗೆ ಪ್ರಮೋಷನ್ ಕೊಟ್ಟು, ಯಾವುದೋ ಒಂದು ಕಪಿಮುಷ್ಟಿಗೆ ಸಿಕ್ಕಿ ಏನೋ ಸರ್ಕಾರ ಹೇಳುತ್ತಿದೆ ಅಂತ ಅವನ ಜವಾಬ್ದಾರಿಯನ್ನು ಮರೆತು ಇದು ಅಪರಾಧ ಎಂದು ಗೊತ್ತಿದ್ದರೂ ಮಾಡಿದಾಗ ಅವನ ರಕ್ಷಣೆಗಾದರೂ ಬರಬೇಕು ಸತ್ಯವನ್ನು ಬಯಲು ಮಾಡಬೇಕು. ಒಂದು ಆಶ್ಚರ್ಯಕರವಾದ ಸಂಗತಿ, ಇದು ಎಲ್ಲರಿಗೂ ಗೊತ್ತಿರುವಂತಾದ್ದು, ಸಂಗ್ರಾಮ್‌ಸಿಂಗ್ ಇಂಟಲಿಜನ್ಸ್ ಡಿ.ವೈ.ಎಸ್.ಪಿ. ಆಗಿದ್ದರು. ಅವನು ಈ ವಾಹನದ ಜೊತೆ ಮತ್ತು ದುಡ್ಡು ತೆಗೆದು ಕೊಂಡು ಹೋಗುವವರ ಜೊತೆ ಹೋಗುವ ಸಂದರ್ಭವೇ ಬರಲಿಲ್ಲ. ಮತ್ತು ನಿಮಗೆ ಗೊತ್ತಿರುವ ಹಾಗೆ ಯಾರು ಇಂಟಲ್‌ಜನ್ಸ್‌ನಲ್ಲಿ ಇರುತ್ತಾರೆ ಅವರ ಹತ್ತಿರ ಯಾವುದೇ ಆರಮ್ಸ್ ಇರುವುದಿಲ್ಲ. ಶಸ್ತ್ರಾಸ್ತ್ರ ಇರುವುದಿಲ್ಲ. ಆಶ್ಚರ್ಯಕರವಾದ ಸಂಗತಿ ಅಂದರೆ ಮಾನ್ಯ ಅಧ್ಯಕ್ಷರೆ, ಇವನು ಹೋಗುವಂತಹ ಸಂದರ್ಭದಲ್ಲಿ ಡಿವೈ.ಎಸ್.ಪಿ. ಈ ಸಿಟಿ ಆರಮ್ಡ್ ರಿಜರ್ವ್ ಇದೆಯಲ್ಲಾ ಅರ್ಮರಿ ಅಂತ ಅಲ್ಲಿಂದ

ಅನ್ ದಟ್ ಸೇಮ್ ಡೇ ಯಾವತ್ತು ಅವನು ಹೋಗಿ ಬಂದಿದ್ದಾನೆ ಏನೆಲ್ಲಾ ವ್ಯವಹಾರ ಮಾಡಿದ್ದಾನೆ ಅವನು ಶಸ್ತ್ರಾಸ್ತ್ರಗಳನ್ನು ಅನುಮತಿ ಪಡೆದು ಸಹಿ ಮಾಡಿ ಜೊತೆಗೆ ತೆಗೆದುಕೊಂಡು ಹೋಗಿದ್ದಾನೆ. ಅಂದರೆ ಅವನಿಗೆ ಏಕೆ ಶಸ್ತ್ರಸ್ತ್ರ? ಬೇರೆ ಯವರು ಇದ್ದರಲ್ಲಾ. ಆರಮ್ಡ್ ಫೋರ್ಸ್ ಇರುವ ದೊಡ್ಡ ದೊಡ್ಡ ಅಧಿಕಾರಿಗಳು ಇದ್ದರು. ಇವನನ್ನು ಏಕೆ ಆಯ್ಕೆ ಮಾಡಿಕೊಂಡಿರಿ? ಇವನನ್ನು ಆಯ್ಕೆ ಮಾಡಿಕೊಂಡು ನೀವು ಕಳುಹಿಸಿಕೊಟ್ಟಿರಿ. ಅವನು ಹೋಗಿ ಅಲ್ಲಿ ಈ ವ್ಯವಹಾರಗಳನ್ನು ಮಾಡಿಕೊಂಡು ಬಂದ. ಯಾರ್ಯಾರು ಈ ಮಾತನ್ನು ಹೇಳಿದ್ದಾರೆ ಯಾರ್ಯಾರು ನಿವೃತ್ತರಾಗಿದ್ದಾರೆ ಅವರು ಟಾಪ್ ಜಾಗದಲ್ಲಿದ್ದಂತಹವರು. ಪೊಲೀಸ್ ಕಮೀಷನರ್ ಆಗಿದ್ದರು, ಪೊಲೀಸ್ ಡಿ.ಜಿ.ಪಿ. ಲೆವೆಲ್‌ವರೆಗೂ ಹೋದರು. ಅವರು ಇದ್ದಾಗ ಅವರು ಬಹಳ ದಕ್ಷರು ಅಂತ ಹೇಳಿ ಅವರಿಗೆ ಸ್ಥಾನಮಾನಗಳನ್ನು ಕೊಟ್ಟು ಅವರು ಹೊರಗಡೆ ಬಂದು ಹೇಳಿಕೆಯನ್ನು ಕೊಟ್ಟ ತಕ್ಷಣ ಅವರು ಹುಚ್ಚರು, ಮೆಡಿಕಲ್ ಚೆಕ್ ಆಫ್ ಆಗಬೇಕು ಇವನು ದುರುದ್ದೇಶದಿಂದ ಈ ತರಹ ಮಾತನಾಡುತ್ತಿದ್ದಾನೆಂದು ಹೇಳುವಂತಾದ್ದು, ಬಹುಶಃ ಯಾವುದೇ ಒಂದು ನಾಗರೀಕ ಸಮಾಜಕ್ಕೆ ಸರ್ಕಾರಕ್ಕೆ ಗೌರವ ತರುವಂತಹ ಸಂಗತಿ ಅಲ್ಲ. ಆದರೆ ಮಾನ್ಯ ಅಧ್ಯಕ್ಷರೆ ನಾನು ಕೇಳುತ್ತೇನೆ ಅಧಿಕಾರರದಲ್ಲಿರುವ ಮಿತ್ರರನ್ನು ನಾನು ಕೇಳುತ್ತೇನೆ. ಯಾರಾದರೂ ಒಬ್ಬ ಅಧಿಕಾರಿ ಇವತ್ತು ಸತ್ಯವನ್ನು ಹೇಳಿ ಸರ್ಕಾರ ತೆಗೆದುಕೊಳ್ಳುವಂತಹ ತೀರ್ಮಾನ ಸರಿಯಲ್ಲವೆಂದು ಗೊತ್ತಾದಾಗ, ಅದನ್ನು ಪ್ರತಿಭಟಿಸಿ ಆ ಸ್ಥಾನದಲ್ಲಿ ಮುಂದುವರಿಯುವಂತಹ ಅವಕಾಶ ಇದೆಯೇ ಸ್ವಾಮಿ ಇವತ್ತಿನ ವ್ಯವಸ್ತೆನಲ್ಲಿ ಎಲ್ಲಾ ಕಲುಷಿತವಾಗಿಲ್ಲವೇ? ಎಲ್ಲಾ ಅಧಿಕಾರಕ್ಕೆ ಬಂದಂತಹ ಜನ ಅವತ್ತಿನ ಸರ್ಕಾರದ ತಾಳಕ್ಕೆ ತಕ್ಕಂತೆ ಕುಣಿಯಬೇಕು ಆ ಕುರ್ಚಿಯಲ್ಲಿ ಕೂರುವುದಾದರೆ ಇಲ್ಲವಾದರೆ ಇಲ್ಲ. ಅಂತಹವನಿಗೆ ಪ್ರಮೋಷನ್, ಅಂತಹವನಿಗೆ ಮನ್ನಣೆ, ಈ ಪದ್ಧತಿ ಏನು ಇವತ್ತು ಬೆಳೆದು ಕೊಂಡು ಬರುತ್ತಿದೆ ಇದರ ಪರಿಣಾಮ ಇವತ್ತು ನಾವು ಬಹಳ ಕೆಟ್ಟದ್ದಾಗಿ ಎದುರಿಸುತ್ತಿದ್ದೇವೆ. ಇವತ್ತು ಈ ಕೇಸ್‌ನಲ್ಲಿ ನಾವು ಬಹಳ ಶಾಂತವಾಗಿ ಸರ್ಕಾರದ ಜೊತೆ ಸಹಕರಿಸುತ್ತಿದ್ದೇವೆ. ನಮ್ಮ ಪತ್ರಕರ್ತ ಸ್ನೇಹಿತರು ಹೇಳಿದರು, ನಾನು ಅವರ ಸಲಹೆಯನ್ನು ತೆಗೆದುಕೊಂಡೆ. ಮಾನ್ಯ ಯಡಿಯೂರಪ್ಪನವರೇ, ತಾವು ಧರಣಿ ಮಾಡುವುದರಿಂದ ಸಭಾತ್ಯಾಗ ಮಾಡುವುದರಿಂದ ಸರಿಯಾದ ರೀತಿ ಚರ್ಚೆಗಳು ಆಗುವುದಿಲ್ಲ ಮತ್ತು ಇದರಿಂದ ನೀವೇನೂ ಲಾಭ ಗಳಿಸುವುದಕ್ಕೆ ಆಗುವುದಿಲ್ಲ ಜನತೆಗೆ ನೀವು ನಿಮ್ಮ ಕರ್ತವ್ಯ ಮಾಡಿದಂತೆ ಆಗುವುದಿಲ್ಲ ಆದ್ದರಿಂದ ಸ್ವಲ್ಪ ಜವಾಬ್ದಾರಿಯಿಂದ ಚರ್ಚೆ ಮೂಲಕ ಪರಿಹಾರ ಹುಡುಕುವಂತಹ ಪ್ರಯತ್ನ ಮಾಡಬೇಕೆಂದು ಅನೇಕ ಹಿರಿಯರು ಹೊರಗಡೆ ಮತ್ತು ಒಳಗಡೆ ಹೇಳಿದ ಮೇಲೆ ನಾನು ಸ್ವಲ್ಪ ನನ್ನ ರೀತಿ ನೀತಿಗಳನ್ನು ಬದಲಾವಣೆ ಮಾಡಿಕೊಳ್ಳುತ್ತಿದ್ದೇನೆ. ಆವತ್ತಿನಿಂದ ಇವತ್ತಿನವರೆಗೂ ಆಶ್ಚರ್ಯ ಅಂದರೆ ಮಾನ್ಯ ಪ್ರಕಾಶ್‌ರವರೆ ಯಾವ ನಾಗಪ್ಪ ರಾಜಕುಮಾರ್ ಜೊತೆ ಇದ್ದ, ಅವನು ಹೊರಗಡೆ ಬಂದಿದ್ದಾನೆ ಅವನು ಹೇಳುತ್ತಾನೆ ದುಡ್ಡು ಬಂತು, 500 ರೂಪಾಯಿನೋಟುಗಳದ್ದು, ನಾವು ಎಣಿಸಿದೆವು ಕಡಿಮೆ ಇತ್ತು ಅಂತ ಹೇಳಿ ಅವನು ಗಲಾಟೆ ಮಾಡಿದ, ಯಾರು ಹಣ ತಂದಿದ್ದ ಅವನು ವಾಪಸ್ಸು ಹೋಗಿ ಆ ಡಿಫರೆನ್ಸ್ ಹಣ ತಂದು ಕೊಡುತ್ತೇನೆಂದು ಹೇಳಿದ ಅಂತ ಈ ಯಡಿಯೂರಪ್ಪ ಹೇಳುತ್ತಿಲ್ಲ ಡಾ॥ ರಾಜ್‌ಕುಮಾರ್ ಜೊತೆಗಿದ್ದಂತಹ ನಾಗಪ್ಪ ಹೇಳಿದ್ದಾನೆ. ಕೋರ್ಟ್ ಮುಂದೆ ತಮಿಳುನಾಡಿನಲ್ಲಿ ಮೂರು ದಿವಸಗಳ ಹಿಂದೆ ಅಫಿಡವಿಟ್ ಹಾಕಿ ಬಂದಿದ್ದಾನೆ ಅದರ ಕಾಪಿ ನನ್ನ ಬಳಿ ಇದೆ. ಅದಾದ ಮೇಲೆ ಅವತ್ತಿನ ಪೊಲೀಸ್ ಇಲಾಖೆಯ ಡೈರಕ್ಟರ್ ಜನರಲ್ ದಿನಕರ್ ಪುಸ್ತಕ. ಇವತ್ತಿನ ಸಂಗ್ರಾಮ್‌ಸಿಂಗ್ ಹೇಳಿಕೆ ಒಂದಕ್ಕೊಂದು ತಾಳೆ ಒಂದೇ ತರಹ ಇರುವುದರಿಂದ

ಅಕ್ಷಮ್ಯ ಅಪರಾಧಕ್ಕೆ ಅವತ್ತು ಇದ್ದಂತಹ ಸರ್ಕಾರ ಬೆನ್ನೆಲುಬು ಆಗಿ ನಿಂತಿತ್ತು. ನಮಗೆ ಚಿಂತೆ ಇರುವುದು ಇದೆಲ್ಲಕ್ಕಿಂತ ಹೆಚ್ಚಾಗಿ ಈ ಹಣವನ್ನು ಸಾರ್ವಜನಿಕವಾಗಿ ನೀವು ಜನರಿಂದ ಒಂದೊಂದು ರೂಪಾಯಿ ಸಂಗ್ರಹ ಮಾಡಿದ್ದರೆ ಈ ಶಾಸಕರ ನಿಧಿಯಿಂದ ಸಂಗ್ರಹ ಮಾಡಿದ್ದರೆ ಸರ್ಕಾರಿ ನೌಕರರಿಂದ ಸಂಗ್ರಹ ಮಾಡಿ ನೀವು ಕೊಟ್ಟಿದ್ದರೆ ನಾನು ನಿಮ್ಮನ್ನು ಅಪ್ರೀಷಿಯೇಟ್ ಮಾಡುತ್ತಿದ್ದೆ. ಅನಿವಾರ್ಯ ರಾಜ್‌ಕುಮಾರ್ ಬಿಡುಗಡೆಯಾಗ ಬೇಕಾಗಿತ್ತು, ಹೌಸ್ ಒಳಗಡೆ ನಾವು ಹೇಳಿದ್ದೇವೆ ಆದರೆ ಆವತ್ತು ಈ ಹಣ ನಕಲಿ ಛಾಪಾ ಕಾಗದದ ರುವಾರಿ ಕರೀಂ ಲಾಲಾ ಇದ್ದಾನೆ ಅವನು ಸಂಗ್ರಹ ಮಾಡಿರುವಂತಾದ್ದು, ಅವನನ್ನು ಆವತ್ತು ಸಿದ್ದಾರ್ಥರವರ ಜೊತೆಗೆ, ಅವತ್ತಿನ ಮುಖ್ಯಮಂತ್ರಿಗಳ ಜೊತೆ ನಾನು ನೋಡಿದೆ ಅಂತ ಹೇಳುತ್ತಾರೆಂದು ಹೇಳಿದ ಮೇಲೆ ಇದನ್ನು ನಾವು ಬಹಿರಂಗವಾಗಿ, ನಾನು ಎಸ್.ಎಂ. ಕೃಷ್ಣರವರು, ಮಾಜಿ ಮುಖ್ಯಮಂತ್ರಿಗಳು ಹೇಳಿಕೆ ಕೊಡಬೇಕೆಂದು ನಾನು ಒತ್ತಾಯ ಮಾಡುವುದಿಲ್ಲ. ತಾವು ಹೇಳಿದಂತೆ ಆದರೆ ಅವರು ಈ ರಾಜ್ಯದ ಮುಖ್ಯಮಂತ್ರಿಯಾಗಿದ್ದವರು, ಅವರು ಸತ್ಯವನ್ನು ಹೇಳಬೇಕು ಇಲ್ಲದಿದ್ದರೆ ಏನಾಗುತ್ತದೆ ಅಂದರೆ ಇದೆಲ್ಲದಕ್ಕೂ ಅವರೇ ಜವಾಬ್ದಾರರು ಅವರೇ ಈ ಎಲ್ಲದ್ದಕ್ಕೂ ನೇತೃತ್ವ ವಹಿಸಿದ್ದರು ಎನ್ನುವುದು ಜಗಜ್ಜಾಹೀರು ಆಗಿದೆ. ಇದನ್ನು ಮುಚ್ಚಿಕೊಳ್ಳದೇ ಸತ್ಯಾಂಶವನ್ನು ಹೊರಗೆಡವಬೇಕು ಎಂದು ನಾನು ಅವರ ಹೇಳಿಕೆಗೆ ಡಿಮ್ಯಾಂಡ್ ಮಾಡುತ್ತೇನೆ. ಅವರು ಆಗುವುದಿಲ್ಲವೆಂದರೆ ನನ್ನದೇನೂ ಅಭ್ಯಂತರವಿಲ್ಲ, ಅದರ ಅರ್ಥ ಪರೋಕ್ಷವಾಗಿ ಅವರು ಅದನ್ನು ಒಪ್ಪಿಕೊಂಡಿದ್ದಾರೆ ಎಂಬುದು ಅರ್ಥವಾಗುತ್ತದೆ.

ಅಧ್ಯಕ್ಷರು : ತಾವು ವಿಷಯವನ್ನು ಪ್ರಸ್ತಾಪ ಮಾಡಿದಿರಿ ಅದಕ್ಕೆ ಸರ್ಕಾರ ಉತ್ತರ ಸಹ ಕೊಟ್ಟಿದೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ ಮಾನ್ಯ ಯಡಿಯೂರಪ್ಪನವರು, ಮಾನ್ಯ ಪತ್ರಿಕಾ ಕರ್ತರು, ಹೊರಗೆ ಮತ್ತು ಒಳಗೆ ಇರತಕ್ಕವರು ಹಿರಿಯರು ಹೇಳಿದ ಕಾರಣಕ್ಕಾಗಿಯೇ ನಾನು ಸಂಪೂರ್ಣವಾಗಿ ಬದಲಾಗಿ ಕೆಲವು ವಿಚಾರಗಳಲ್ಲಿ ನಾನು ಅನುಸರಿಸುತ್ತಿದ್ದೇನೆ ಎನ್ನುವ ಮಾತನ್ನು ಹೇಳಿದರು. ಈ ಸಂದರ್ಭದಲ್ಲಿ ನಾನು ಬಹಳ ದೊಡ್ಡ ಬುದ್ಧಿವಂತ ಅಂತ ಹೇಳುತ್ತೇನೆಂದು ಅಲ್ಲ. ಒಂದು ವಿಚಾರವನ್ನು ಪ್ರಸ್ತಾಪ ಮಾಡಿದಾಗ ಈ ರೀತಿ ಪ್ರಸ್ತಾಪ ಮಾಡಿದಾಗ, ಅವರು ಬಹಳ ಹಿರಿಯ ಸದಸ್ಯರು ಇದು ನಿಯಮವಳಿಗಳ ಪ್ರಕಾರ ನಡೆಯಬೇಕು ಅಂತ ಹೇಳಿ ಈ ಸದನದಲ್ಲಿ ನಾವೇ ಮಾಡಿರತಕ್ಕಂಥ ಕಾನೂನು ಇದೆ. ಈಗ ಅವರು ಈ ವಿಚಾರವನ್ನು ಪ್ರಸ್ತಾಪ ಮಾಡಿದರಲ್ಲ ಯಾವ ನಿಯಮಗಳ ಅಡಿಯಲ್ಲಿ ಇದನ್ನು ಪ್ರಸ್ತಾಪ ಮಾಡಿದರು ಎನ್ನುವುದು ಒಂದನೇ ಪ್ರಶ್ನೆ. ಎರಡನೆಯದು ಅದಕ್ಕೆ ತಾವು ಅನುಮತಿಯನ್ನು ಕೊಟ್ಟಿರಿ ಎಂಬುದು ಗೊತ್ತಾಗಲಿಲ್ಲ, ಕೊಡಲಿಲ್ಲ ಎನ್ನುವುದು ಗೊತ್ತಾಗಲಿಲ್ಲ, ತಾವು ಮೌನವಾಗಿದ್ದಿರಿ, ಮೌನಂ ಅರ್ಥ ಸಮ್ಮತಿ ಎಂದು ನಾನು ಭಾವಿಸಿಕೊಂಡೆ. ಅದಕ್ಕೆ ನಾನು ಉತ್ತರವನ್ನೂ ಸಹ ಕೊಟ್ಟಿದ್ದೇನೆ.

ಅಧ್ಯಕ್ಷರು : ಮುಕ್ತಾಯವಾಯಿತು ಬಿಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ದಯವಿಟ್ಟು ಕ್ಷಮಿಸಿ. ಮಾನ್ಯ ಸಂಸದೀಯ ವ್ಯವಹಾರಗಳ ಮಂತ್ರಿಗಳು ಪದೇ ಪದೇ ಕಾನೂನು ಪುಸ್ತಕ ಹೇಳುತ್ತಾರೆ. ಆದರೆ ಇಲ್ಲಿ ಇರುವಂತಾದ್ದು ಈ ಸದನ ನಡೆಯುವ ಕಾರ್ಯಕಲಾಪ ವ್ಯವಸ್ಥೆ ಬಗ್ಗೆ. ಮಾನ್ಯ ಯಡಿಯೂರಪ್ಪ ವೈಯಕ್ತಿಕವಾಗಿ ನಾನು ನಿಂತಿಲ್ಲ. ಮಾನ್ಯ ಸಭಾಧ್ಯಕ್ಷರ ಅನುಮತಿಯನ್ನು ಪಡೆದು ಪ್ರಾಮುಖ್ಯವಾದ ವಿಷಯವನ್ನು ಚರ್ಚೆಮಾಡುತ್ತೇನೆಂದು ಕೇಳಿ ಚರ್ಚೆ ಮಾಡಿದ್ದೇನೆ. ಅದಕ್ಕೆ ಮಾನ್ಯ ಸಚಿವರಾದ ಪ್ರಕಾಶ್‌ರವರು ಉತ್ತರ ಸಹ ಕೊಟ್ಟರು.

ಅಧ್ಯಕ್ಷರು : ನಿಯಮಗಳ ಪ್ರಕಾರವೇ ನಾನು ಈ ಸಭೆ ನಡೆಸಬೇಕು. ಆದರೆ ತಾವು ವಿರೋಧಪಕ್ಷದ ನಾಯಕರು ಎದ್ದು ನಿಂತುಕೊಂಡಿರಿ. ವಿರೋಧಪಕ್ಷದ ನಾಯಕರಿಗೆ ತಮ್ಮದೇ ಆದ ಒಂದು ಗೌರವ ಸ್ಥಾನಮಾನ ಇದೆ. ಆದ್ದರಿಂದ ಅತ್ಯಂತ ಗಂಭೀರವಾದ ಪ್ರಮುಖವಾದ ವಿಷಯವನ್ನು ಹೇಳುತ್ತಾರೆಂದು ನಾನು ಕೇಳಿದೆ, ಆಯಿತು ಮಾನ್ಯ ಸಚಿವರು ಅದಕ್ಕೆ ಉತ್ತರ ಕೊಟ್ಟರು ಮುಕ್ತಾಯವಾಯಿತು ಬಿಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಅವರ ಹೇಳಿಕೆಗೆ ಒತ್ತಾಯ ಮಾಡುವುದಿಲ್ಲ. ನನ್ನ ಕರ್ತವ್ಯವನ್ನು ನಾನು ಮಾಡಿದ್ದೇನೆ. ಮಾಜಿ ಮುಖ್ಯಮಂತ್ರಿಗಳಾದ ಎಸ್.ಎಂ. ಕೃಷ್ಣರವರು ಒಂದು ಹೇಳಿಕೆಯನ್ನು ಕೊಡುವುದು ಒಳ್ಳೆಯದು ಅಂತ ನಾನು ಡಿಮ್ಯಾಂಡ್ ಮಾಡಿದ್ದೇನೆ ಹೇಳಿಕೆ ಕೊಡುವುದು ಬಿಡುವುದು ಅವರಿಗೆ ಬಿಟ್ಟಿದ್ದು. ಕೊಡಿಸುವುದು ಬಿಡುವುದು ನಿಮಗೆ ಬಿಟ್ಟಿದ್ದು.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ ಅವರು ಹಿರಿಯರಾಗಿರುವುದರಿಂದ ಮತ್ತು ವಿರೋಧಪಕ್ಷದ ನಾಯಕರಾಗಿರುವುದರಿಂದ ತಾವು ಎದ್ದು ನಿಂತು ಸ್ವಲ್ಪ ಈಲ್ಡ್ ಆಗಿ ಅಂದ ತಕ್ಷಣ ನಾವು ಈಲ್ಡ್ ಆಗುತ್ತೇವೆ. ನಾವು ನಿಮ್ಮನ್ನು ವಿನಯದಿಂದ ಈಲ್ಡ್ ಆಗಿ ಎಂದು ಕೇಳಿಕೊಂಡಾಗ ತಾವು ಈಲ್ಡ್ ಆಗಿ ದಯಮಾಡಿ ಸಹಕಾರ ಕೊಡಬೇಕು. ಇಲ್ಲಿ ಪ್ರಶ್ನೆ ಇರತಕ್ಕಂಥಾದ್ದು ಅವರು ಎತ್ತಿರತಕ್ಕಂಥ ವಿಚಾರಕ್ಕೆ ನಾನು ಉತ್ತರ ಕೊಟ್ಟೆ. ಆ ಉತ್ತರ ಅವರಿಗೆ ಗೊತ್ತಿರತಕ್ಕಂಥಾದ್ದು ಆಗಿರಬಹುದು ಅಥವಾ ಗೊತ್ತಿಲ್ಲದೇ ಇರಬಹುದು ಈಗ ನಾವು ಹೇಳಲೇಬೇಕಾಗಿರತಕ್ಕಂಥಾದ್ದನ್ನು ಕೆಲವು ನಿಯಮಾವಳಿಗಳ ಪ್ರಕಾರ ಎತ್ತಬೇಕು ಅಂತ ಹೇಳಿ ನಾನು ಒಬ್ಬ ಸಂಸದೀಯ ವ್ಯವಹಾರಗಳ ಸಚಿವನಾಗಿ ಇದನ್ನು ಎತ್ತಬೇಕಾದಂತಾದ್ದು ನನ್ನ ಕರ್ತವ್ಯ. ಸಾರ್ವಜನಿಕವಾಗಿರತಕ್ಕಂಥ ವಿಷಯಗಳನ್ನು ಸಾಮಾನ್ಯ ಜನಗಳಿಗೆ ಮತ್ತು ಈ ಸದನಕ್ಕೆ ಗೊತ್ತಾಗಬೇಕು ಅಂತ ತಾವು ತಮ್ಮ ಕರ್ತವ್ಯವನ್ನು ಯಾವ ರೀತಿಯಲ್ಲಿ ನಿರ್ವಹಿಸುತ್ತೀರಿ ಹಾಗೆಯೇ ನಾನು ಒಬ್ಬ ಸಂಸದೀಯ ವ್ಯವಹಾರಗಳ ಮಂತ್ರಿಯಾಗಿ ಕೂಡ ಈ ಸಭಾ ನಡವಳಿಕೆಯಲ್ಲಿ ಅಧ್ಯಕ್ಷರಿಗೆ ನಾವು ಸಹಕಾರಿಯಾಗುವಂತಹ ರೀತಿಯಲ್ಲಿ ಈ ರೀತಿ ನಮ್ಮ ನಿಯಮಾವಳಿಗಳು ಇವೆ ಆ ನಿಯಮಾವಳಿಗಳ ಪ್ರಕಾರ ನಡೆಯಬೇಕು ಎನ್ನುವಂತಹ ವಿಚಾರವನ್ನು ನಾನು ಹೇಳಲೇಬೇಕಾಗುತ್ತದೆ. ಆದ್ದರಿಂದ ಪ್ರತಿಯೊಂದು ಸಲ ತಾವು ರೂಲ್ಸ್ ಬುಕ್ ಹಿಡಿದುಕೊಂಡು ನಿಂತುಕೊಳ್ಳಬೇಡಿ ಅಂದರೆ ನಾನು ರೂಲ್ಸ್ ಬುಕ್ ಹಿಡಿದುಕೊಂಡು ನಿಂತುಕೊಂಡಿರಲಿಕ್ಕಾಗಿಯೇ ನನ್ನನ್ನು ಮಂತ್ರಿ ಮಾಡಿರುವುದು. ಆ ಕಾರಣಕ್ಕಾಗಿ, ದಯಮಾಡಿ ತಾವು ತಪ್ಪು ತಿಳಿದುಕೊಳ್ಳಬೇಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅದಕ್ಕಿಂತ ದೊಡ್ಡ ಜವಾಬ್ದಾರಿ ತಮಗೆ ಕೊಡಲಿ. ಇದರಿಂದ ನಮಗೆ ಬಹಳ ತೊಂದರೆಯಾಗುತ್ತಿದೆ. ಅವರಿಗೆ ಬೇರೆ ಒಂದು ಒಳ್ಳೆಯ ಜಾಗ ಕೊಡಲಿ.

ಅಧ್ಯಕ್ಷರು : ಈಗ ಪ್ರಶ್ನೋತ್ತರ ವೇಳೆಗೆಹೋಗೋಣ. ಪ್ರಶ್ನೋತ್ತರ ವೇಳೆ. ಶ್ರೀ ಹೆಚ್. ನಿಂಗಪ್ಪನವರು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ ಒಂದೇ ಒಂದು ನಿಮಿಷ.

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರೆ ತಾವು ದಯವಿಟ್ಟು ಸಹಕರಿಸಿ. ನಾನು ಮಾನ್ಯ ಹೆಚ್. ನಿಂಗಪ್ಪನವರನ್ನು ಕರೆದಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ ನಾನು ಒಂದು ನಿಮಿಷದ ಮೇಲೆ ಹೋಗುವುದಿಲ್ಲ. ಮಾನ್ಯ ಯಡಿಯೂರಪ್ಪನವರು ಒಂದು ಗುರುತರವಾದ ಪ್ರಶ್ನೆಯನ್ನು ಎತ್ತಿದ್ದಾರೆ.

ಆ ಬಗ್ಗೆ ಸಮಗ್ರವಾಗಿ ಚರ್ಚೆ ಆಗಿದೆ. ತಮಗೆ ಗೊತ್ತಿರುವ ಹಾಗೆ ಇಲ್ಲಿ ಬಹಳ ಪ್ರಾಮುಖ್ಯವಾಗಿರತಕ್ಕಂಥಾದ್ದು ರಾಜ್‌ಕುಮಾರ್ ಅಪಹರಣ ಮತ್ತು ರಾಜ್‌ಕುಮಾರ್ ಬಿಡುಗಡೆ. ಈ ಸಂದರ್ಭದಲ್ಲಿ ಹಣ ಕೊಟ್ಟು ಬಿಡುಗಡೆಯಾಗಿದೆ. ಯಾರು ಕೊಟ್ಟರು ಹೇಗೆ ಕೊಟ್ಟರು ಎನ್ನತಕ್ಕಂಥಾದ್ದು ಮುಖ್ಯ.

ಅಧ್ಯಕ್ಷರು : ಮಾನ್ಯ ನಾಗರಾಜ್‌ರವರೆ ಯಾವುದೋ ನಿಯಮಗಳು ಇಲ್ಲದೇ ಈ ರೀತಿ ಆದರೆ ಕಷ್ಟವಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ ದಿನಕರ್ ಪುಸ್ತಕದಲ್ಲಿ ಹಣ ಕೊಟ್ಟಿದ್ದಾರೆಂದು ಬರುತ್ತದೆ. ಮತ್ತು ಸಂಗ್ರಾಮ್ ಸಿಂಗ್ ಹೇಳಿಕೆಯಲ್ಲಿ ಹಣ ಕೊಟ್ಟಿದ್ದಾರೆಂದು ಬರುತ್ತದೆ. ಮತ್ತು ಜಯಲಲಿತಾರವರು ಅವರ ಸರ್ಕಾರದಲ್ಲಿ ಈರೋಡ್‌ನ ನ್ಯಾಯಾಲಯದಲ್ಲಿ 40 ಕೋಟಿ ರೂಪಾಯಿಯನ್ನು ಕಾಡುಗಳ್ಳನಿಗೆ ಕೊಟ್ಟು ಬಿಡುಗಡೆ ಆಯಿತು ಎಂದು ಬಂದಿದೆ. ಇದೆಲ್ಲಾ ನೋಡಿದಾಗ ಹಣ ಕೊಟ್ಟಿರುವುದು ಸ್ಪಷ್ಟ. ಅದಕ್ಕೆ ನಾನು ಏನು ಹೇಳುತ್ತೇನೆಂದರೆ ಇದು ಯಾವುದು ಯಾವುದಕ್ಕೂ ಸಂಬಂಧ ಬರುವುದಿಲ್ಲ. ಆ ಪ್ರಕರಣವನ್ನು ಸಂಪೂರ್ಣವಾಗಿ ಸಿ.ಬಿ.ಐ. ತನಿಖೆಗೆ ತಾವು ವಹಿಸಿ. ರಾಜ್‌ಕುಮಾರ್ ಅಪಹರಣ ರಾಜ್‌ಕುಮಾರ್ ಬಿಡುಗಡೆ.

(ಗೊಂದಲ)

ಅಧ್ಯಕ್ಷರು : ಮಾನ್ಯ ನಾಗರಾಜ್‌ರವರೆ ಒಂದು ನಿಮಿಷ ಅಂತ ಹೇಳಿ ತಾವು ಈ ರೀತಿ ಮಾಡುವುದು ಸರಿಯಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ನಾಗಪ್ಪನವರ ಸಾವಿಗೆ ಸರ್ಕಾರವೇ ಕಾರಣ.

(ಗೊಂದಲ)

ಅಧ್ಯಕ್ಷರು : ತಾವು ಹಿರಿಯ ನಾಯಕರು ತಾವು ಈ ವಿಚಾರವನ್ನು ತರುವುದಿಲ್ಲವೆಂದು ತಿಳಿದಿದ್ದೇ. ತಾವು ಈ ವಿಚಾರದ ಬಗ್ಗೆ ಮಾತನಾಡುವುದಕ್ಕೆ ಹೊರಟು ಹೋದರೆ ಹೇಗೆ? ತಾವು ಯಾವ ನಿಯಮಗಳ ಅಡಿಯಲ್ಲಿ ಎತ್ತಿದ್ದೀರಿ? ಏನೋ ಮಾನ್ಯ ವಿರೋಧಪಕ್ಷದ ನಾಯಕರು ಎದ್ದು ನಿಂತುಕೊಂಡಾಗ ನಾನು ಮಾತನಾಡಲು ಅವಕಾಶ ಕೊಟ್ಟೆ. ಅವರು ಉತ್ತರ ಕೊಟ್ಟರು ಮುಕ್ತಾಯವಾಯಿತು. ಅದಕ್ಕೆ ಒಂದೊಂದು ನಿಮಿಷ ಅಂತ ಹೇಳಿ ಎಲ್ಲರೂ ಮಾತನಾಡಿದರೆ ಹೇಗೆ ದಯಮಾಡಿ ತಾವು ಯೋಚನೆ ಮಾಡಿ. ನನಗೆ ತಮ್ಮ ಬಗ್ಗೆ ತುಂಬಾ ಗೌರವ ಇದೆ.

ಶ್ರೀ ವಾಟಾಳ್ ನಾಗರಾಜ್ : ತಾವು ಬೇಜಾರು ಮಾಡಿಕೊಂಡರೆ ನಾನು ಕುಳಿತುಕೊಳ್ಳುತ್ತೇನೆ

ಅಧ್ಯಕ್ಷರು : ಬೇಜಾರು ಅಲ್ಲ. ತಾವು ವಿಚಾರ ಹೇಳಿದ್ದೀರಿ. ಬೇರೆ ರೂಪದಲ್ಲಿ ಚರ್ಚೆಗೆ ತನ್ನಿ ಈಗ ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ ಮಾನ್ಯ ಇಬ್ಬರೂ ಹಿರಿಯ ಸದಸ್ಯರು ಮಾತನಾಡಿದ್ದು ಕಡತಕ್ಕೆ ಹೋಗಿದೆ ನಾಳೆ ಪತ್ರಿಕೆಗಳಲ್ಲಿ ಸಹ ಬರುತ್ತದೆ. ಆದ್ದರಿಂದ ನಾನು ಒಂದೇ ಒಂದು ನಿಮಿಷ ಅವಕಾಶ ತೆಗೆದುಕೊಂಡು ಈ ಮಾತನ್ನು ಹೇಳುತ್ತೇನೆ. ಅದು ಸರ್ಕಾರದ ಉತ್ತರ ಸಹ ಆಗಿರಬೇಕು. ಗೌರವಾನ್ವಿತರಾಗಿರತಕ್ಕಂಥ ಮಾಜಿ ಮುಖ್ಯಮಂತ್ರಿಗಳು 1962ರಿಂದ ಸಾರ್ವಜನಿಕ

ಜೀವನದಲ್ಲಿ ಅನೇಕ ಗುರುತರವಾದಂತಹ ದೊಡ್ಡ ದೊಡ್ಡ ಸ್ಥಾನಗಳನ್ನು ಅಲಂಕರಿಸಿ ತಮ್ಮದೇ ಆದಂತಹ ವ್ಯಕ್ತಿತ್ವ ಮತ್ತು ಚಾಪುವನ್ನು ಕನ್ನಡ ನಾಡಿನಲ್ಲಿ ಬಿಟ್ಟಿದ್ದಾರೆ.

11.40 ಎಎಂ

ವಿಶ್ವೇಶ್ವರ ಹೆಗಡೆಯವರೆ, ಸ್ವಾತಂತ್ರ್ಯ ಬಂದ ನಂತರ ನಡೆಸಿದ ಎಲ್ಲಾ ಸರ್ಕಾರಗಳ ಕಥೆ ಹೀಗೆ, ಆ ಪಕ್ಷ ಈ ಪಕ್ಷವೆಂದಲ್ಲ, ಆ ಬಗ್ಗೆ ಈಗ ಮಾತನಾಡುವುದು ಬೇಡ. ಈಗ ಅವರು ಉತ್ತರ ಕೊಡುತ್ತಿದ್ದಾರೆ ದಯ ಮಾಡಿ ಕೇಳಿ, ಕೆಲವು ನಿಯಮಗಳನ್ನು ಇಲ್ಲಿ ಅನುಸರಿಸಿ ಚರ್ಚೆ ಮಾಡೋಣ.

(ಗೊಂದಲ)

ಶ್ರೀ ವಿಶ್ವೇಶ್ವರಹೆಗಡೆ ಕಾಗೇರಿ : ಮಾಜಿ ಮುಖ್ಯಮಂತ್ರಿಗಳಿಗೆ ಉತ್ತರಕೊಡುವುದಕ್ಕೆ ತೊಂದರೆಯಾಗುತ್ತದೆಂದು, ಇವರಿಗೆ ಉತ್ತರಕೊಡುವುದಕ್ಕೆ ಆತ ರೈಸ್ ಮಾಡಿದ್ದಾರೊ ಹೇಗೆ?

ಅಧ್ಯಕ್ಷರು : ದಯಮಾಡಿ ಸಹಕರಿಸಬೇಕು. ಮಾನ್ಯ ಸಚಿವರು ಸರ್ಕಾರದ ವತಿಯಿಂದ ಏನು ಹೇಳುತ್ತಾರೆ ನೋಡೋಣ.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೆ, ನಾವು ಯಾರ ಪರವಾಗಿಯೂ ಕೂಡ ಇಲ್ಲಿ ಮೆಚ್ಚುಗೆಯ ಮಾತುಗಳನ್ನಾದುತ್ತೇವೆಂದು ಭಾವಿಸಿಕೊಳ್ಳಬಾರದು, ಇಲ್ಲಿ ಪ್ರಸ್ತಾಪಿಸಲ್ಪಟ್ಟಾಗ ಸರ್ಕಾರ ಅದಕ್ಕೆ ಉತ್ತರವನ್ನು ಕೊಡಲೆಬೇಕಾಗುತ್ತದೆ, ಸರ್ಕಾರ ಉತ್ತರಕೊಡಲೆಂದೇ ಸನ್ಮಾನ್ಯ ವಿರೋಧಪಕ್ಷದ ನಾಯಕರು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಪ್ರಸ್ತಾಪ ಮಾಡಿರುವ ಕಾರಣಕ್ಕಾಗಿ, ಆ ಪ್ರತಿಯೊಂದು ಪ್ರಶ್ನೆಗಳನ್ನು, ಸಂಶಯಗಳನ್ನು ವ್ಯಕ್ತಮಾಡಿದ ವ್ಯಕ್ತಿಗಳಿಗೆ, ಅದಕ್ಕೆ ಸಂಬಂಧಿಸಿದ ವ್ಯಕ್ತಿ ಸಾಮಾನ್ಯ ಮನುಷ್ಯನಾಗಿದ್ದರೂ ಕೂಡ ಪ್ರತಿಕ್ರಿಯೆ ತೋರಿಸಬೇಕೆನ್ನುವ ಮಾತಿಲ್ಲ. ಆ ಕಾರಣಕ್ಕಾಗಿ ಈ ವಿಚಾರವನ್ನು ಇಲ್ಲಿಗೆ ಕೈಬಿಡಬೇಕೆಂದು ನಿಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

3. ಪ್ರಶ್ನೋತ್ತರ

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು ಕುಣಿಗಲ್ ಕ್ಷೇತ್ರದಲ್ಲಿ ಕೆರೆಗಳ ಅಭಿವೃದ್ಧಿ

113(854) ಶ್ರೀ ನಿಂಗಪ್ಪ ಹೆಚ್.(ಕುಣಿಗಲ್) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?'

ಅ) ಕುಣಿಗಲ್ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಕರೆಗಳಲ್ಲಿ ಮೀನು ಅಭಿವೃದ್ಧಿಗೊಳಿಸಲು ಕೈಗೊಂಡಿರುವ ಕ್ರಮಗಳೇನು;

ಆ) ಯಾವ ಯಾವ ಏಜನ್ಸಿಗಳಿಂದ ಕೆರೆಗಳಲ್ಲಿ ಮೀನು ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) ಕುಣಿಗಲ್ ಕ್ಷೇತ್ರದ ವ್ಯಾಪ್ತಿಗೆ ಬರುವ ಕೆರೆಗಳ ಮೀನು ಪಾಶುವಾರು ಹಕ್ಕನ್ನು ಇಲಾಖೆಯ ಕೆರೆಗಳ ವಿಲೇವಾರಿ ನಿಯಮದ ಪ್ರಕಾರ ಗುತ್ತಿಗೆ, ಟೆಂಡರ್/ಹರಾಜು ಅಥವಾ ಪರವಾನಗಿ ಮೂಲಕ ಮೀನುಗಾರಿಕೆ ಅಭಿವೃದ್ಧಿ ಪಡಿಸಲು ವಿಲೇವಾರಿ ಮಾಡಲಾಗುವುದು. ಸದರಿ ಕೆರೆಗಳಲ್ಲಿ ದಾಸ್ತಾನು